# Annual Plan 2011-12

## Hon'ble Chief Minister's Meeting with Deputy Chairman, Planning Commission, New Delhi

22.03.2011

**Press Conference**

Hon'ble Higher Education Minister Dr. V.S Acharya briefed the Media on behalf of the Chief Minister

---

1. The meeting with the Deputy Chairman, Planning Commission, was held today, in which the Annual Plan for Karnataka for the year 2011-12 was finalized.

2. I have recently presented the Karnataka budget for 2011-12 in the Legislature which has the total outlay increased to Rs.83,729 crore from Rs. 70,063 crore during 2010-11.

3. Our Annual Plan for 2011-12 is fixed at Rs. 38,070 crore which is about 23% higher than the previous year's plan size of Rs. 31,050 crore.

4. The per capita plan outlay of Karnataka at Rs. 5,217 in 2010-11 is one of the highest among major States.

5. As compared to the current year, we have increased the allocations considerably in 2011-12 for Agriculture (66%), Irrigation (55%), Energy (31%), and Rural Development (31%).

6. For the first time in the entire country, we have made a novel attempt to formulate a separate budget for Agriculture and Rs.17,857 crore has been allocated to this sector.

7. The Agriculture Sector has shown a satisfying growth of 5.9% for the year 2010-11 and the food production has reached a record level of 125 lakh tone. What is more rewarding is that the yield of Oil Seeds and Cotton has increased by 32% and 38% respectively.

8. My government has taken many initiatives to improve agriculture incomes. Some of these measures are:

   a) The State is providing agriculture loan at an interest of 1% to farmers through Co-operative Societies.

   b) Extended the Bhoo-chetna programme to all the 30 districts to cover 30 lakh farmers from 16 districts covering 12 lakh hectares at present.

   c) The State is providing Rs.1000 crore for improvement of lives of 10 lakh agriculture farmers under the Suvarna Bhoomi Yojane.

   d) Establishing Agriculture Infrastructure Fund of Rs.500 crore.

   e) Increasing the Agriculture Revolving Fund to Rs.1000 crore.

   f) Rs.200 crore will be provided for organic farming to increase the number of organic farmers from the present level of 87,200 to 5,28,000 in the coming years, with every taluk having 3000 organic farming families.

   g) The State will be launching Agri-business Development Policy and Organizing the Global Agro Investment Meet for the first time in the country.

9. The decade 2011-20 has been declared as "Irrigation Decade" with focus on Water Resources Management in Karnataka. Rs.7800 crore has been provided in the coming year.

10. For rejuvenation of tanks and for filling up of water in the dried tanks, an amount of Rs.1,000 crore will be provided.

11. In the last two and a half years, 14 incomplete and lingering irrigation projects have been completed and an action will be taken to complete the other projects which are ongoing since more than 2 decades on fast track.

12. The State Legislature has passed the "Karnataka Groundwater Bill"

13. Karnataka is undergoing severe power crisis and load shortages. The State is facing power deficit of 11% and peak deficit of 20%.

14. State is engaged in strenuous attempts to promote new projects in the public and private sectors. Our intention is to add a minimum of 5000-8000 MW in the next 5 years.

15. Karnataka Power Corporation has taken up the following projects: Yermarus (1600 MW), Edlapur (800 MW), Bellary (700 MW) and Godhna (1600 MW).

16. The State is setting up coal-based Regional Project by NTPC with a capacity of 4000 MW at Kudigi in Bijapur district.

17. The State has initiated development of two power projects under competitive bidding route of 1320 MW at Gulbarga and Ghataprabha.

18. For uninterrupted power supply to the villages and Cottage Industries in rural areas and also for supply of quality power for a specified period, for the Niranthara Jyothi Scheme is being implemented in a phased manner in 126 taluks at a cost of Rs.2123 crores.

19. The Industrial development has been given equal attention. The Global Investors meet held in the month of June last year was a phenomenal success. An investment of Rs.5.25 lakh crore has been generated and it is expected to give employment to 8.5 lakh persons. Already 225 schemes have commenced wherein approximately Rs.2.5 lakh crore investment has been made.

20. The State has taken several measures for development of urban infrastructure by spending Rs. 6000 crore through BDA, BBMP, BWSSB and BMTC. Four major projects financed by the external funding agencies at a total investment of Rs.7,500 crore are being implemented. Under Mukhya Mantri Nagarothana Yojane Rs.1,013 crore has been utilized in the past three years by the urban local bodies to develop urban infrastructure.

21. The Reach-1 of first phase of Bangalore Metro will be launched in April 2011.

22. A campaign has been launched to complete the incomplete works of 2009-10 under NREGA. The State has taken up a massive Job card validation campaign. So far, 12.50 lakh bogus cards have been cancelled.

23. Our 24X7 Ambulance Service (Arogya Kavacha) has effectively saved 9.84 lakh lives, institutional births have improved to 93.3%, 32.12 lakh families are covered under various health insurance programmes and we would like to have the support of Government of India to extend this universally.

24. To empower women through micro finance and livelihood support, we have organized them into 1.4 lakh SHG's. To promote education and health of girl child we have supported the families under Bhagyalakshmi programme. We have further strengthened our gender budgeting by providing Rs.4855 crore in 2011-12 plan.

25. Our Government is committed to maintain social justice. An amount of Rs.4730 crore was provided for Welfare of SC and ST during the year 2010-11. This has been increased to Rs.6,500 crore in the next year. 70,000 SC,ST,BC and Minorities students have been provided residential school facilities. 4.5 lakh students are provided pre and post metric hostel facilities. 30,000 children of these communities are to be trained in Nursing, Para Medical and ITI.

26. The Department of e-Governance, has created national benchmarks in a number of applications covering e-delivery of services to the citizens like Bangalore-One, Karnataka-One etc. and also created state wide applications which have made governance more accessible to all the stake holders, enhanced transparency and accountability.

27. The fully integrated e-procurement platform has saved to the State exchequer an amount in excess of Rs.10,000 crore in meeting its procurement needs.

28. Karnataka is way ahead in implementation of UID and stands first in the country overtaking Maharastra and Andhra Pradesh, even though these 2 states launched UID programme well before us.

29. The Planning Commission has appreciated the Karnataka Government's performance in the following areas :

- Maintaining the fiscal discipline,
- Upgradation of human skills,
- Infrastructure Development,
- Power Generation etc.,

30. We have sought the intervention of the Planning Commission on the following critical areas :

- To advise the Ministry of Finance to set the borrowing limit for each State based on their debt sustaining capacity,
- To advise the Central Government Ministries to desist from bypassing the State budget in routing of funds for centrally sponsored schemes,
- To re-examine the issue of reduction of silk import duty from 30% to 5%,
- To enhance Center's contribution under AIBP,

- Allocation of domestic gas for Gas based Power Projects at Bidadi and Thadadi,
- To advise the Union Government for providing Coal linkage to the State's Power Projects,
- To provide environmental clearance for Edlapur and Godhna Thermal Power Projects and Gundya Hydro Electric Project,
- To advise the Railways to finalize the PPP policy and also to speed up the ongoing Railway Projects in Karnataka,
- To advise the Center to extend mid-day meal programmes for high school students ($9^{th}$ and 10 standard),
- To allocate funds in the ratio of 75:25 to implement Right to Education Act,
- To sanction I.I.T. for Karnataka besides sanctioning I.I.I.T. for Dharwad,
- To allocate more funds under NRHM to 12 high focus 'C' category districts with very low health indicators.

-- --- --

## ವಾರ್ಷಿಕ ಯೋಜನೆ 2011-12

## ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರ ಭೇಟಿ ಕುರಿತಂತೆ

## ಪತ್ರಿಕಾ ಗೋಷ್ಠಿ

(Hon'ble Higher Education Minister Dr. V.S Acharya briefed the Media on behalf of the Chief Minister)

**22-03-2011 /ನವದೆಹಲಿ**

---

1. ಯೋಜನಾ ಆಯೋಗದ ಉಪಾಧ್ಯಕ್ಷ ಜೊತೆ ಇಂದು ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯದ 2011-12ನೇ ಸಾಲಿನ ವಾರ್ಷಿಕ ಯೋಜನಾ ಗಾತ್ರಕ್ಕೆ ಅನುಮೋದನೆ ಪಡೆಯಲಾಯಿತು.

2. 24-02-2011ರಂದು ನಾನು ಕರ್ನಾಟಕ ರಾಜ್ಯದ 2011-12ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದೇನೆ. 2010-11ನೇ ಸಾಲಿನ ಆಯವ್ಯಯದ ಒಟ್ಟು ಗಾತ್ರ 70,063 ಕೋಟಿ ರೂ.ಗಳಾಗಿದ್ದು, ಈ ಮೊತ್ತವನ್ನು 2011-12ನೇ ಸಾಲಿಗೆ 83,729 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

3. ಹಿಂದಿನ ವರ್ಷದ ಯೋಜನಾ ಗಾತ್ರ 31,050 ಕೋಟಿ ರೂ.ಗಳಾಗಿದ್ದು, 2011-12ನೇ ಸಾಲಿಗೆ ಈ ಗಾತ್ರವನ್ನು 38,070 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.(ಶೇ.23ರಷ್ಟು ಹೆಚ್ಚಳ)

4. ಕರ್ನಾಟಕ ರಾಜ್ಯದ 2010-11ನೇ ಸಾಲಿನ ತಲಾ ಯೋಜನಾ ಗಾತ್ರವು 5,217 ಕೋಟಿ ರೂ.ಗಳಾಗಿದ್ದು, ಇದು ರಾಷ್ಟ್ರದ ಪ್ರಮುಖ ರಾಜ್ಯಗಳ ಪೈಕಿ ಅತಿ ಹೆಚ್ಚಿನ ತಲಾ ಯೋಜನಾ ಗಾತ್ರಗಳಲ್ಲಿ ಒಂದಾಗಿದೆ.

5. 2010-11ನೇ ಸಾಲಿಗೆ ಹೋಲಿಸಿದಲ್ಲಿ, 2011-12ನೇ ಸಾಲಿನಲ್ಲಿ ಹಲವಾರು ಇಲಾಖೆಗಳಿಗೆ ಶೇಕಡವಾರು ಅನುದಾನ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಉದಾಹರಣೆಗೆ ಕೃಷಿ (ಶೇ.66ರಷ್ಟು), ನೀರಾವರಿ (ಶೇ.55), ಇಂಧನ (ಶೇ.31), ಗ್ರಾಮೀಣ ಅಭಿವೃದ್ಧಿ(ಶೇ.31).

6. ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ 2011-12ನೇ ಸಾಲಿಗೆ 17,857 ಕೋಟಿ ರೂ.ಗಳ ಗಾತ್ರದ ಪ್ರತ್ಯೇಕ ಹಾಗೂ ವಿನೂತನವಾದ ಕೃಷಿ ಬಜೆಟ್‌ನ್ನು ನಾನು ಮಂಡಿಸಿದ್ದೇನೆ.

7. ರಾಜ್ಯದ ಕೃಷಿ ಕ್ಷೇತ್ರವು 2010-11ನೇ ಸಾಲಿನಲ್ಲಿ ಶೇ.5.9ರಷ್ಟು ತೃಪ್ತಿಕರ ಬೆಳವಣಿಗೆ ಹೊಂದಿದ್ದು, ಒಟ್ಟಾರೆ ಆಹಾರ ಉತ್ಪಾದನೆ ದಾಖಲೆ ಪ್ರಮಾಣವಾದ 125 ಲಕ್ಷ ಟನ್

ತಲುಪಿದೆ. ಇನ್ನೊಂದು ಗಮನಾರ್ಹ ಸಾಧನೆ ಎಂದರೆ ಎಣ್ಣೆ ಬೀಜಗಳು ಹಾಗೂ ಹತ್ತಿ ಬೆಳೆಯ ಇಳುವರಿ ಕ್ರಮವಾಗಿ ಶೇ.32 ಹಾಗೂ 38ರಷ್ಟು ಅಧಿಕವಾಗಿದೆ.

8. ಕೃಷಿ ಆದಾಯವನ್ನು ಹೆಚ್ಚಿಸಲು ನಮ್ಮ ಸರ್ಕಾರ ಈ ಕೆಳಕಂಡಂತೆ ಹಲವಾರು ವಿಶಿಷ್ಠ ಕ್ರಮಗಳನ್ನು ಕೈಗೊಂಡಿದೆ.

- ಸಹಕಾರಿ ಸಂಘಗಳ ಮೂಲಕ ರೈತರಿಗೆ ಶೇ.1 ಬಡ್ಡಿ ದರದಲ್ಲಿ ಕೃಷಿಸಾಲ ವಿತರಣೆ.
- ಭೂ ಚೇತನ ಯೋಜನೆಯನ್ನು ಹಾಲಿ ಇರುವ 16 ಜಿಲ್ಲೆಗಳ 12 ಲಕ್ಷ ಹೆಕ್ಟೇರ್ ಜಮೀನಿನಿಂದ ರಾಜ್ಯದ ಎಲ್ಲಾ 30 ಜಿಲ್ಲೆಗಳ 30 ಲಕ್ಷ ರೈತರಿಗೆ ವಿಸ್ತರಿಸಿರುವುದು.
- ಸುವರ್ಣಭೂಮಿ ಯೋಜನೆಯಡಿ 10 ಲಕ್ಷ ಕೃಷಿಕರ ಅಭಿವೃದ್ಧಿಗಾಗಿ 1,000 ಕೋಟಿ ರೂ.ಗಳ ಅನುದಾನ.
- 500 ಕೋಟಿ ರೂ.ಗಳ ಕೃಷಿ ಮೂಲಭೂತ ಸೌಕರ್ಯಗಳ ಅನುದಾನ.
- ಕೃಷಿ ಆವರ್ತನಿಧಿಯನ್ನು 1,000 ಕೋಟಿ ರೂ.ಗಳಿಗೆ ಹೆಚ್ಚಳ.
- ಸಾವಯವ ಕೃಷಿ ಮಿಷನ್ ವ್ಯಾಪ್ತಿಯಲ್ಲಿ ಹಾಲಿ 87,200 ರೈತರು ಕ್ರಿಯಾಶೀಲವಾಗಿದ್ದು, ಈ ಸಂಖ್ಯೆಯನ್ನು ಪ್ರತಿ ತಾಲ್ಲೂಕಿನಲ್ಲಿ 3,000 ಕೃಷಿ ಕುಟುಂಬಗಳಂತೆ ಒಟ್ಟು 5,28,000ಕ್ಕೆ ಹೆಚ್ಚಿಸಲು ಗುರಿ, ಇದಕ್ಕಾಗಿ 200 ಕೋಟಿ ರೂ.ಗಳ ಅನುದಾನ.
- ಕೃಷಿ ಉದ್ಯಮ ಅಭಿವೃದ್ಧಿ ನೀತಿಯ ಅನುಷ್ಠಾನಕ್ಕೆ ಹಾಗೂ ದೇಶದಲ್ಲೇ ಮೊದಲ ಬಾರಿಗೆ ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಆಯೋಜನೆಗೆ ತೀರ್ಮಾನ.

9. 2011ರಿಂದ 2020ರವರೆಗಿನ ಅವಧಿಯನ್ನು "ನೀರಾವರಿ ದಶಕ" ಎಂದು ಘೋಷಣೆ, ರಾಜ್ಯದ ಜಲಸಂಪನ್ಮೂಲ ನಿರ್ವಹಣೆಗೆ ವಿಶೇಷ ಗಮನ. ನೀರಾವರಿ ಚಟುವಟಿಕೆಗಳಿಗಾಗಿ 2011–12ನೇ ಸಾಲಿಗೆ 7,800 ಕೋಟಿ ರೂ.ಗಳ ಅನುದಾನ ಹಂಚಿಕೆ.

10. ಕೆರೆಗಳ ಪುನಶ್ಚೇತನಕ್ಕಾಗಿ 1000 ಕೋಟಿ ರೂ.ಗಳ ಅನುದಾನ.

11. ನಮ್ಮ ಸರ್ಕಾರದ ಕಳೆದ ಎರಡೂವರೆ ವರ್ಷಗಳಲ್ಲಿ ಇದುವರೆಗೆ ಅಪೂರ್ಣವಾಗಿದ್ದ 14 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಜೊತೆಗೆ ಕಳೆದ ಎರಡು ದಶಕಗಳಿಗೂ ಅಧಿಕ ಅವಧಿಯಿಂದ ನೆನೆಗುದಿಗೆ ಬಿದ್ದಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳಲಾಗುವುದು.

12. ರಾಜ್ಯ ವಿಧಾನ ಮಂಡಲದಲ್ಲಿ "ಕರ್ನಾಟಕ ಅಂತರ್‌ಜಲ ಮಸೂದೆ" ಯನ್ನು ಅನುಮೋದಿಸಲಾಗಿದೆ.

13. ಕರ್ನಾಟಕ ರಾಜ್ಯದಲ್ಲಿ ತೀವ್ರ ವಿದ್ಯುತ್ ಕೊರತೆ ಇದೆ. ರಾಜ್ಯವು ಪಿಕ್ ಡಿಮಾಂಡ್ ಅವಧಿಯಲ್ಲಿ ಶೇ.20ರಷ್ಟು ಹಾಗೂ ಸರಾಸರಿಯಾಗಿ ಶೇ.11ರಷ್ಟು ವಿದ್ಯುತ್ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದೆ.

14. ಮುಂದಿನ 5 ವರ್ಷಗಳ ಅವಧಿಯಲ್ಲಿ ಕನಿಷ್ಠ 5,000 ದಿಂದ 8,000 ಮೆಗಾವ್ಯಾಟ್ ವಿದ್ಯುತ್ ಅನ್ನು ಹೆಚ್ಚುವರಿಯಾಗಿ ಉತ್ಪಾದಿಸುವ ಗುರಿಯೊಂದಿಗೆ ಹಲವಾರು ನೂತನ ವಿದ್ಯುತ್ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

15. ಕರ್ನಾಟಕ ವಿದ್ಯುತ್ ನಿಗಮವು ಯರಮರಸ್ (1,600 ಮೆ.ವ್ಯಾ), ಯಡ್ಲಾಪುರ (800 ಮೆ.ವ್ಯಾ), ಬಳ್ಳಾರಿ (700 ಮೆ.ವ್ಯಾ) ಮತ್ತು ಗೋಧ್ನಾ(1,600 ಮೆ.ವ್ಯಾ) ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

16. ಬಿಜಾಪುರ ಜಿಲ್ಲೆಯ ಕೂಡಗಿಯಲ್ಲಿ ಎನ್.ಟಿ.ಪಿ.ಸಿ ಸಹಯೋಗದೊಂದಿಗೆ 4,000 ಮೆ.ವ್ಯಾ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲಾಗುತ್ತಿದೆ.

17. ಗುಲ್ಬರ್ಗ ಹಾಗೂ ಘಟಪ್ರಭಾಗಳಲ್ಲಿ 1,320 ಮೆ.ವ್ಯಾ ಸಾಮರ್ಥ್ಯದ 2 ವಿದ್ಯುತ್ ಯೋಜನೆಗಳನ್ನು ಸ್ಪರ್ಧಾತ್ಮಕ ಗುತ್ತಿಗೆ ಆಧಾರದ ಮೇಲೆ ಅನುಷ್ಠಾನ ಮಾಡಲಾಗುತ್ತಿದೆ.

18. ಗ್ರಾಮೀಣ ಪ್ರದೇಶಗಳಿಗೆ ನಿರಂತರವಾಗಿ, ಗುಣಮಟ್ಟದ ವಿದ್ಯುತ್‌ನ್ನು ಹಂತ ಹಂತವಾಗಿ 126 ತಾಲ್ಲೂಕುಗಳಲ್ಲಿ 2,123 ಕೋಟಿ ರೂ.ಗಳ ವೆಚ್ಚದಲ್ಲಿ ಸರಬರಾಜು ಮಾಡಲು "ನಿರಂತರ ಜ್ಯೋತಿ" ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

19. ಕೈಗಾರಿಕೆಗಳ ಅಭಿವೃದ್ಧಿಗೂ ಸಮಾನ ಗಮನ ಕೊಡಲಾಗಿದೆ. 2010ರ ಜೂನ್‌ನಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಅಭೂತ ಪೂರ್ವ ಯಶಸ್ಸು ಕಂಡಿತು. ಈ ಸಮಾವೇಶದಲ್ಲಿ ಸುಮಾರು 8.5 ಲಕ್ಷ ಮಂದಿಗೆ ಉದ್ಯೋಗ ಒದಗಿಸುವ ಸಾಮರ್ಥ್ಯದ, ಸುಮಾರು 5.25 ಲಕ್ಷ ಕೋಟಿ ರೂ.ಗಳ ಬಂಡವಾಳದ ವಿವಿಧ ಯೋಜನೆಗಳಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಇವುಗಳ ಪೈಕಿ ಅಂದಾಜು 2.5 ಲಕ್ಷ ಕೋಟಿ ರೂ.ಗಳ ಬಂಡವಾಳದ 225 ಯೋಜನೆಗಳ ಅನುಷ್ಠಾನ ಈಗಾಗಲೇ ಪ್ರಗತಿಯಲ್ಲಿದೆ.

20. ಬೆಂಗಳೂರು ಮಹಾನಗರದ ಅಭಿವೃದ್ಧಿಗಾಗಿ ಬಿ.ಡಿ.ಎ, ಬಿ.ಬಿ.ಎಂ.ಪಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿ.ಎಂ.ಟಿ.ಸಿ ಮುಂತಾದ ಸಂಸ್ಥೆಗಳ ಮೂಲಕ ಸುಮಾರು 6,000 ಕೋಟಿ ರೂ.ಗಳ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಬಾಹ್ಯ ಆರ್ಥಿಕ ನೆರವು ನೀಡುತ್ತಿರುವ ಸಂಸ್ಥೆಗಳ ಸಹಯೋಗದಲ್ಲಿ ಸುಮಾರು 7,500 ಕೋಟಿ

ರೂ.ಗಳ ವೆಚ್ಚದಲ್ಲಿ ನಗರಾಭಿವೃದ್ಧಿಯ 4 ಬೃಹತ್ ಯೋಜನೆಗಳು ಜಾರಿಯಲ್ಲಿವೆ. ಕಳೆದ ಮೂರು ವರ್ಷಗಳಲ್ಲಿ, ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 1,013 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

21. ಮೆಟ್ರೊ ರೈಲು ಯೋಜನೆಯ ಮೊದಲ ಹಂತದ ರೀಚ್–1 ಮಾರ್ಗದಲ್ಲಿ ರೈಲು ಸಂಚಾರವನ್ನು ಏಪ್ರಿಲ್ 2011ರಲ್ಲಿ ಪ್ರಾರಂಭಿಸಲಾಗುವುದು.

22. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2009–10ನೇ ಸಾಲಿನಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒಂದು ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಯೋಜನೆಯ ಸಮರ್ಪಕ ಅನುಷ್ಠಾನದ ನಿಟ್ಟಿನಲ್ಲಿ ಇಲ್ಲಿಯವರೆಗೆ ಸುಮಾರು 12.50 ಲಕ್ಷ ನಕಲಿ ಕಾರ್ಡ್‌ಗಳನ್ನು ಪತ್ತೆಮಾಡಿ ರದ್ದುಗೊಳಿಸಲಾಗಿದೆ. ಈ ಪ್ರಕ್ರಿಯೆಯನ್ನು ಮುಂದುವರಿಸಲಾಗುವುದು.

23. ಆರೋಗ್ಯಕವಚ 108 ಯೋಜನೆಯಡಿ ಇದುವರೆಗೆ ಸುಮಾರು 9.84 ಲಕ್ಷ ಅಮೂಲ್ಯ ಜೀವಗಳನ್ನು ಉಳಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಉಚಿತ ಅಂಬ್ಯುಲೆನ್ಸ್ ಹಾಗೂ ಪ್ರಥಮ ಚಿಕಿತ್ಸೆ ಒದಗಿಸುವ ಈ ಯೋಜನೆಯ ಸದುಪಯೋಗದಿಂದ ಆಸ್ಪತ್ರೆಗಳಲ್ಲಿ ಮಕ್ಕಳ ಜನನವು ಶೇ.93.3ರಷ್ಟು ತಲುಪಿದೆ. ವಿವಿಧ ಆರೋಗ್ಯ ವಿಮಾ ಯೋಜನೆಯಡಿ ರಾಜ್ಯಾದ್ಯಂತ 32.12 ಲಕ್ಷ ಕುಟುಂಬಗಳನ್ನು ಒಳಪಡಿಸಲಾಗಿದೆ. ಈ ಯೋಜನೆಯಡಿ ಸೌಲಭ್ಯವನ್ನು ಎಲ್ಲರಿಗೂ ಒದಗಿಸಲು ಕೇಂದ್ರ ಸರ್ಕಾರದ ನೆರವನ್ನು ಕೋರಲಾಗಿದೆ.

24. ಮಹಿಳೆಯರ ಸಬಲೀಕರಣಕ್ಕಾಗಿ ಸುಮಾರು 1.4 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಕಿರುಸಾಲ ನೀಡಲಾಗಿದೆ. ಬಿ.ಪಿ.ಎಲ್ ಕುಟುಂಬದ ಹೆಣ್ಣು ಶಿಶುವಿನ ಸಬಲೀಕರಣಕ್ಕಾಗಿ ಭಾಗ್ಯಲಕ್ಷ್ಮೀ ಯೋಜನೆಗೆ ಹೊಸ ಆಯಾಮ ನೀಡಲಾಗಿದೆ. 2011–12ನೇ ಸಾಲಿನ ಆಯವ್ಯಯದಲ್ಲಿ ಲಿಂಗ ಸಬಲೀಕರಣ ಚಟುವಟಿಕೆಗಳಿಗಾಗಿಯೇ 4,855 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

25. ಸಾಮಾಜಿಕ ನ್ಯಾಯ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. 2010–11ನೇ ಸಾಲಿನಲ್ಲಿ ಪರಿಶಿಷ್ಠ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿಯೇ 4,730 ಕೋಟಿ ರೂ.ಗಳನ್ನು ಮೀಸಲಿಡಲಾಗಿತ್ತು, 2011–12ನೇ ಸಾಲಿಗೆ ಈ ಮೊತ್ತವನ್ನು 6,500 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಶಿಷ್ಠ ಜಾತಿ, ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ಸುಮಾರು 70,000 ವಿದ್ಯಾರ್ಥಿಗಳಿಗೆ ಸನಿವಾಸ ಶಾಲೆಗಳನ್ನು ತೆರೆಯಲಾಗಿದೆ. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಂತಗಳ ಸುಮಾರು 4.5 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ನಿಲಯ ಸೌಲಭ್ಯ ಒದಗಿಸಲಾಗಿದೆ. ಈ ವಿದ್ಯಾರ್ಥಿಗಳ ಪೈಕಿ ಸುಮಾರು 30,000 ವಿದ್ಯಾರ್ಥಿಗಳಿಗೆ ನರ್ಸಿಂಗ್, ಐ.ಟಿ.ಐ, ಪ್ಯಾರಾ ಮೆಡಿಕಲ್ ಮುಂತಾದ ವೃತ್ತಿಪರ ತರಬೇತಿ ನೀಡುವ ಗುರಿಯಿದೆ.

26. ನಮ್ಮ ಸರ್ಕಾರದ ಇ–ಆಡಳಿತ ಇಲಾಖೆಯು ತನ್ನ ಬೆಂಗಳೂರು–ಒನ್, ಕರ್ನಾಟಕ–ಒನ್ ಮುಂತಾದ ಸಾರ್ವಜನಿಕರಿಗೆ ಎಲ್ಲಾ ಸೇವೆಗಳನ್ನು ಒಂದೇ ಸೂರಿನಡಿ ಗಣಕೀಕರಣ ವ್ಯವಸ್ಥೆಯಲ್ಲಿ ನೀಡುವ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿಯೇ ಪ್ರಖ್ಯಾತಿ ಪಡೆದಿದೆ.

27. ಸಮಗ್ರ ಇ–ಶೇಖರಣೆ ವ್ಯವಸ್ಥೆಯಿಂದಾಗಿ ರಾಜ್ಯದಲ್ಲಿ ವಿವಿಧ ಶೇಖರಣೆ ಪ್ರಕ್ರಿಯೆಯಲ್ಲಿ 10,000 ಕೋಟಿ ರೂ.ಗಳಿಗಿಂತಲೂ ಅಧಿಕ ಮೊತ್ತವು ರಾಜ್ಯದ ಬೊಕ್ಕಸಕ್ಕೆ ಉಳಿತಾಯವಾಗಿದೆ.

28. ಆಧಾರ(ಯು.ಐ.ಡಿ) ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯವು ಇಡೀ ದೇಶದಲ್ಲಿಯೇ ಮುಂಚೂಣಿ ಸ್ಥಾನದಲ್ಲಿದೆ. ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳು ಈ ಯೋಜನೆಯ ಅನುಷ್ಠಾನವನ್ನು ಕರ್ನಾಟಕ ರಾಜ್ಯಕ್ಕಿಂತ ಮೊದಲೇ ಪ್ರಾರಂಭಿಸಿದ್ದರೂ ಸಹ, ಕರ್ನಾಟಕ ರಾಜ್ಯವು ಪ್ರಸ್ತುತ ಆ ರಾಜ್ಯಗಳನ್ನು ಹಿಂದಕ್ಕೆ ಹಾಕಿ ರಾಷ್ಟ್ರ ಮಟ್ಟದಲ್ಲಿಯೇ ಮೊದಲನೆ ಸ್ಥಾನದಲ್ಲಿದೆ.

29. ಯೋಜನಾ ಆಯೋಗವು ಕರ್ನಾಟಕ ರಾಜ್ಯದ ಈ ಕೆಳಕಂಡ ಕ್ಷೇತ್ರಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ.

- ವಿತ್ತೀಯ ಶಿಸ್ತು
- ಮಾನವ ಕೌಶಲ್ಯದ ಅಭಿವೃದ್ಧಿ,
- ಮೂಲಭೂತ ಸೌಕರ್ಯಗಳ ಅಭಿವೃದ್ಧಿ
- ಇಂಧನ ಉತ್ಪಾದನೆ ಇತ್ಯಾದಿ

30. ಈ ಕೆಳಕಂಡ ಪ್ರಮುಖ ಚಟುವಟಿಕೆಗಳಿಗೆ ಅಗತ್ಯ ಬೆಂಬಲ ನೀಡಲು ಕೇಂದ್ರ ಯೋಜನಾ ಆಯೋಗಕ್ಕೆ ಮನವಿ ಸಲ್ಲಿಸಲಾಗಿದೆ.

- ಪ್ರತಿ ರಾಜ್ಯಕ್ಕೆ ಅದರ ಸಾಲ ನಿರ್ವಹಣೆ ಸಾಮರ್ಥ್ಯದ ಆಧಾರದ ಮೇಲೆ ಸಾಲ ತೆಗೆದುಕೊಳ್ಳುವ ಮಿತಿಯನ್ನು ನಿರ್ಧರಿಸಲು ಕೇಂದ್ರಸರ್ಕಾರದ ಆರ್ಥಿಕ ಮಂತ್ರಾಲಯಕ್ಕೆ ಸಲಹೆ ನೀಡುವುದು.
- ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ ಒದಗಿಸುವಾಗ ರಾಜ್ಯದ ಆಯವ್ಯಯವನ್ನು ಕಡೆಗಣಿಸದಿರುವಂತೆ ಕೇಂದ್ರ ಮಂತ್ರಾಲಯಗಳಿಗೆ ಸಲಹೆ ನೀಡುವುದು.
- ರೇಷ್ಮೆ ಮೇಲಿನ ಆಮದು ತೆರಿಗೆಯನ್ನು ಶೇ.30ರಿಂದ ಶೇ.5ಕ್ಕೆ ಇಳಿಸಿರುವುದನ್ನು ಮರು ಪರಿಶೀಲಿಸುವುದು.

- ಎ.ಐ.ಬಿ.ಪಿ ಯೋಜನೆಯಡಿ ಕೇಂದ್ರದ ಪಾಲನ್ನು ಅಧಿಕಗೊಳಿಸುವುದು.

- ಬಿಡದಿ ಹಾಗೂ ತದಡಿಯ ಅನಿಲ ಆಧಾರಿತ ವಿದ್ಯುತ್ ಯೋಜನೆಗಳಿಗೆ ಆಂತರಿಕ ಅನಿಲ ಸಂಪನ್ಮೂಲ ಹಂಚಿಕೆ ಮಾಡುವುದು.

- ರಾಜ್ಯದ ವಿದ್ಯುತ್ ಯೋಜನೆಗಳಿಗೆ ಕಲ್ಲಿದ್ದಲು ಸಂಪರ್ಕ/ಕಲ್ಲಿದ್ದಲು ಬ್ಲಾಕ್ ಒದಗಿಸಲು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು.

- ಯಡ್ಲಾಪುರ ಮತ್ತು ಗೋಧ್ನಾ ಉಷ್ಣ ವಿದ್ಯುತ್ ಹಾಗೂ ಗುಂಡ್ಯಾ ಜಲವಿದ್ಯುತ್ ಯೋಜನೆಗಳಿಗೆ ಪರಿಸರ ಮಂತ್ರಾಲಯದ ಅನುಮತಿ ದೊರಕಿಸಿ ಕೊಡುವುದು.

- ರಾಜ್ಯದಲ್ಲಿ ಹಾಲಿ ಅನುಷ್ಠಾನಗೊಳ್ಳುತ್ತಿರುವ ರೈಲ್ವೆ ಯೋಜನೆಗಳನ್ನು ತ್ವರಿತಗೊಳಿಸಲು ಹಾಗೂ ಪಿ.ಪಿ.ಪಿ ನೀತಿಯನ್ನು ಅಂತಿಮಗೊಳಿಸುವಂತೆ ರೈಲ್ವೆ ಇಲಾಖೆಗೆ ಸಲಹೆ ನೀಡುವುದು.

- ಮದ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೂ(9ಮತ್ತು 10ನೇ ತರಗತಿಗಳಿಗೆ) ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡುವುದು.

- ಶಿಕ್ಷಣ ಹಕ್ಕು ಕಾಯ್ದೆಯನ್ನು ಅನುಷ್ಠಾನ ಮಾಡಲು 75:25 ಅನುಪಾತದಲ್ಲಿ ಅನುದಾನ ಒದಗಿಸುವುದು.

- ಧಾರವಾಡದಲ್ಲಿ ಐ.ಐ.ಐ.ಟಿ ಮಂಜೂರಾತಿ ಜೊತೆಗೆ ಕರ್ನಾಟಕ ರಾಜ್ಯಕ್ಕೆ ಐ.ಐ.ಟಿ ಸಂಸ್ಥೆಯನ್ನು ಮಂಜೂರು ಮಾಡುವುದು.

- ಎನ್.ಆರ್.ಹೆಚ್.ಎಂ ಯೋಜನೆಯಡಿ ಅತ್ಯಂತ ಕಡಿಮೆ ಆರೋಗ್ಯ ಸೂಚಕಗಳನ್ನು ಒಳಗೊಂಡ ರಾಜ್ಯದ 12 ಸಿ ವರ್ಗದ ಜಿಲ್ಲೆಗಳಿಗೆ ಅಧಿಕ ಅನುದಾನವನ್ನು ಒದಗಿಸುವುದು.

***********